4027/5081/6041/7041

**V Semester 3 Year LL.B./IX Semester 5 Yr. B.A.LL.B. (Maj.-Min. System)/ B.B.A.LL.B./B.Com.LL.B. Examination, September/October 2023 (June 2023)**

**CIVIL PROCEDURE CODE AND LIMITATION ACT**

Duration : 3 Hours Max. Marks : 80

**Instructions : 1. Answer all five Units.**

ಸೂಚನೆಗಳು : ಎಲ್ಲಾ ಐದು ಘಟಕಗಳಿಗೆ ಉತ್ತರಿಸಿರಿ.

**2. One essay type question and short note/problems is compulsory from each Unit.**

ಪ್ರತಿಯೊಂದು ಘಟಕದಿಂದ ಒಂದು ದೀರ್ಘ ಪ್ರಶ್ನೆ ಮತ್ತು ಕಿರು ಟಿಪ್ಪಣಿ/ ಸಮಸ್ಯೆ ಕಡ್ಡಾಯ.

**3. Figures to the right side indicate the marks.**

ಬಲಭಾಗದಲ್ಲಿಯ ಸಂಖ್ಯೆಗಳು ಅಂಕಗಳನ್ನು ಸೂಚಿಸುತ್ತದೆ.

**4. Answer should be written either in English or Kannada completely.**

ಉತ್ತರವನ್ನು ಇಂಗ್ಲೀಷ್ ಅಥವಾ ಕನ್ನಡ ಭಾಷೆಯಲ್ಲಿ ಪೂರ್ಣವಾಗಿ ಬರೆಯಬೇಕು.

UNIT – I

ಘಟಕ – I

Q. No. 1. a) Discuss the provisions of C.P.C. in respect of place of suing. Marks : 10

ದಾವಾ ಹೂಡಿಕೆಯ ಸ್ಥಳದ ಕುರಿತು ದಿವಾನಿ ಪ್ರಕ್ರಿಯಾ ಸಂಹಿತೆಯಲ್ಲಿನ ಉಪಬಂಧಗಳನ್ನು ಚರ್ಚಿಸಿರಿ.

OR/ಅಥವಾ

Q. No. 1. a) Explain the conditions for applicability of doctrine of "res-subjudice". Marks : 10

"ದಾವೆಯ ತಡೆ" ನ್ಯಾಯ ಸಿದ್ಧಾಂತ ಅನ್ವಯಿಕೆಗೆ ಇರುವ ಷರತ್ತುಗಳನ್ನು ವಿವರಿಸಿರಿ.

Q. No. 1. b) Foreign judgement. Marks : 6

ವಿದೇಶಿ ತೀರ್ಪುಗಳು.

OR/ಅಥವಾ

Q. No. 1. b) 'A' residing in Delhi, beats 'B' in Calcutta. 'B' wants to file a suit against 'A'. Where he can sue ? Advise him. Marks : 6

ದೆಹಲಿಯಲ್ಲಿ ವಾಸವಿರುವ 'A' ನು 'B' ನನ್ನು ಕಲ್ಕತ್ತಾದಲ್ಲಿ ಹೊಡೆಯುತ್ತಾನೆ. 'B' ನು 'A' ನ ವಿರುದ್ಧ ದಾವೆ ಹೂಡಲು ಬಯಸುತ್ತಾನೆ. ಹಾಗಾದರೆ ಅವನು ಯಾವ ಸ್ಥಳದಲ್ಲಿ ದಾವೆ ಹೂಡಬೇಕು ಎಂಬುವುದರ ಬಗ್ಗೆ 'B' ಗೆ ಸಲಹೆ ನೀಡಿ.

P.T.O.

UNIT – II

ಘಟಕ – II

Q. No. 2. a) What are 'costs' ? Explain the different types of costs awarded in civil cases. Marks : 10

'ವೆಚ್ಚ' ಎಂದರೇನು ? ದಿವಾನಿ ಪ್ರಕರಣಗಳಲ್ಲಿ ನೀಡಲಾಗುವ ವಿವಿಧ ಪ್ರಕಾರಗಳ ವೆಚ್ಚಗಳನ್ನು ವಿವರಿಸಿರಿ.

OR/ಅಥವಾ

Q. No. 2. a) Explain the general rules of pleading. Marks : 10

ವಾದ-ಪ್ರತಿವಾದ ಪತ್ರಗಳ ಸಾಮಾನ್ಯ ನಿಯಮಗಳನ್ನು ವಿವರಿಸಿರಿ.

Q. No. 2. b) Written statement – Defences available to the defendant. Marks : 6

ಪ್ರತಿವಾದ ಪತ್ರ- ಪ್ರತಿವಾದಿಗೆ ಸಿಗುವ ಪ್ರತಿರಕ್ಷೆಗಳು.

OR/ಅಥವಾ

Q. No. 2. b) Set-off and counter claim. Marks : 6

ವಜಾವಟ್ಟು ಮತ್ತು ಎದುರು ದಾವೆ.

UNIT – III

ಘಟಕ – III

Q. No. 3. a) Explain consequences of appearance and non-appearance of parties in a suit. Marks : 10

ದಾವೆಯಲ್ಲಿನ ಪಕ್ಷಗಾರರ ಹಾಜರಾತಿ ಮತ್ತು ಗೈರು ಹಾಜರಾತಿಯ ಪರಿಣಾಮಗಳನ್ನು ವಿವರಿಸಿರಿ.

OR/ಅಥವಾ

Q. No. 3. a) Explain the various modes of execution of decree. Marks : 10

ಡಿಕ್ರಿಯನ್ನು ಅಮಲ್ಜಾರಿಗೊಳಿಸುವ ವಿವಿಧ ಬಗೆಗಳನ್ನು ವಿವರಿಸಿರಿ.

Q. No. 3. b) Affidavit. Marks : 6

ಪ್ರಮಾಣಪತ್ರ. (ಅಫಿಡಾವಿಟ್)

OR/ಅಥವಾ

Q. No. 3. b) Admissions. Marks : 6

ಒಪ್ಪುವಿಕೆಗಳು. (ಒಪ್ಪಿಗೆಗಳು)



UNIT – IV

ಘಟಕ – IV

Q. No. 4. a) What is temporary injunction ? Explain the grounds and principles to grant a temporary injunction. Marks : 10

ತಾತ್ಕಾಲಿಕ ನಿರ್ಬಂಧಾಜ್ಞೆ ಎಂದರೇನು ? ತಾತ್ಕಾಲಿಕ ನಿರ್ಬಂಧಾಜ್ಞೆಯನ್ನು ನೀಡಲು ಬೇಕಾದ ಆಧಾರ ಮತ್ತು ತತ್ವಗಳನ್ನು ವಿವರಿಸಿರಿ.

OR/ಅಥವಾ

Q. No. 4. a) Explain under what circumstances a reference can be made to High Court ? Marks : 10

ಯಾವ ಸಂದರ್ಭಗಳಲ್ಲಿ ಉಚ್ಚ ನ್ಯಾಯಾಲಯಕ್ಕೆ ಅಭಿಪ್ರಾಯಕ್ಕಾಗಿ ಕೋರಿಕೆ ಮಾಡಬಹುದು ? ವಿವರಿಸಿರಿ.

Q. No. 4. b) Arrest before judgement. Marks : 6

ತೀರ್ಪಿಗೆ ಮುಂಚೆ ದಸ್ತಗಿರಿ.

OR/ಅಥವಾ

Q. No. 4. b) Caveat. Marks : 6

ಎಚ್ಚರಿಕೆ ಪತ್ರ.

UNIT – V

ಘಟಕ – V

Q. No. 5. a) Explain the provisions in respect of condonation of delay. Marks : 10

ವಿಳಂಬ ಮನ್ನಿಸುವಿಕೆಗೆ ಸಂಬಂಧಿಸಿದ ನಿಯಮಗಳನ್ನು ವಿವರಿಸಿರಿ.

OR/ಅಥವಾ

Q. No. 5. a) "Once the time has begun to run, no subsequent disability or inability can stop it." Discuss. Marks : 10

"ಒಮ್ಮೆ ಕಾಲವು ಉರುಳಲು ಪ್ರಾರಂಭವಾದರೆ ಮುಂದಿನ ಯಾವ ಅಸಮರ್ಥತೆ ಅಥವಾ ಅನರ್ಹತೆ ಅದನ್ನು ತಡೆಯಲಾರದು." ಚರ್ಚಿಸಿರಿ.

Q. No. 5. b) "Limitation extinguishes remedy but not right." Explain. Marks : 6

"ಕಾಲ ಪರಿಮಿತಿಯು ಪರಿಹಾರವನ್ನು ನಾಶಗೊಳಿಸುತ್ತದೆ, ಆದರೆ ಹಕ್ಕನ್ನು ಅಲ್ಲ." ವಿವರಿಸಿ.

OR/ಅಥವಾ

Q. No. 5. b) Objects of law of limitations. Marks : 6

ಕಾಲಮಿತಿ ಅಧಿನಿಯಮದ ಉದ್ದೇಶಗಳು.

---

**V Semester 3 Year LL.B./IX Semester 5 Year B.A. LL.B./B.B.A. LL.B./B.A. LL.B. (Maj.-Min.System)/B.Com. LL.B. Examination, Sept./Oct. 2023 (June 2023)**
**CIVIL PROCEDURE CODE AND LIMITATION ACT**

Duration : 3 Hours Max. Marks : 100

**Instructions : 1. Answer Q. No. 9 and any five of the remaining.**
**2. Q. No. 9 carries 20 marks and the remaining questions carry 16 marks each.**
**3. Answers should be written either in English or Kannada completely.**

Q. No. 1. Explain the different kinds of jurisdiction of the civil courts. Marks : 16

ದಿವಾನಿ ನ್ಯಾಯಾಲಯಗಳ ವಿವಿಧ ಪ್ರಕಾರದ ಅಧಿಕಾರ ವ್ಯಾಪ್ತಿಯನ್ನು ವಿವರಿಸಿರಿ.

Q. No. 2. Briefly explain the different parts of a plaint. Marks : 16

ವಾದ ಪತ್ರದ ವಿವಿಧ ಭಾಗಗಳನ್ನು ಸಂಕ್ಷಿಪ್ತವಾಗಿ ವಿವರಿಸಿರಿ.

Q. No. 3. Explain the object for which 'commission' can be appointed. What are the powers of commissioners ? Marks : 16

'ಕಮೀಷನ್'ಗಳನ್ನು ನೇಮಕ ಮಾಡುವ ಉದ್ದೇಶಗಳನ್ನು ವಿವರಿಸಿರಿ. ಕಮೀಷನರ್‌ಗಳ ಅಧಿಕಾರಗಳು ಯಾವುವು ?

Q. No. 4. Who are the parties to a suit ? Discuss joinder of parties and effect of non-joinder of parties. Marks : 16

ಒಂದು ದಾವೆಯ ಪಕ್ಷಗಾರರು ಯಾರು ? ಪಕ್ಷಗಾರರ ಸೇರ್ಪಡೆ ಮತ್ತು ಸೇರ್ಪಡಿಸದಿರುವಿಕೆಯ ಪರಿಣಾಮಗಳನ್ನು ಚರ್ಚಿಸಿರಿ.

Q. No. 5. What is attachment ? Explain the properties which are not liable for attachment and sale in execution of a decree. Marks : 16

ಜಪ್ತಿ ಎಂದರೇನು ? ಡಿಕ್ರಿ ಜಾರಿಯಲ್ಲಿ ಜಪ್ತಿ ಹಾಗೂ ಮಾರಾಟ ಮಾಡಲಾಗದ ಸ್ವತ್ತುಗಳು ಯಾವುವು ಎಂಬುದನ್ನು ವಿವರಿಸಿರಿ.

Q. No. 6. Distinguish between judgement and decree. Marks : 16

ತೀರ್ಪು ಮತ್ತು ಡಿಕ್ರಿಗಳಿಗಿರುವ ವ್ಯತ್ಯಾಸಗಳನ್ನು ತಿಳಿಸಿರಿ.

Q. No. 7. What is legal disability ? Discuss the provisions in the Limitation Act affording protection under such disability. Marks : 16

ಕಾನೂನಿನ ದೃಷ್ಟಿಯಿಂದ ಅನರ್ಹತೆ ಎಂದರೇನು ? ಕಾಲಪರಿಮಿತಿ ಅಧಿನಿಯಮದಲ್ಲಿ ಇಂತಹ ಅನರ್ಹತೆಗೆ ಇರುವ ರಕ್ಷಣೆಯ ಉಪಬಂಧಗಳನ್ನು ಚರ್ಚಿಸಿರಿ.

Q. No. 8. Write short notes on **any two** of the following : Marks : 8×2=16

ಈ ಕೆಳಗಿನವುಗಳಲ್ಲಿ ಯಾವುದಾದರೂ ಎರಡಕ್ಕೆ ಕಿರು ಟಿಪ್ಪಣಿ ಬರೆಯಿರಿ :

(a) Stay of suits.
ದಾವೆಯ ತಡೆ.

(b) Re-view.
ಪುನರ್-ಅವಲೋಕನ.

(c) Affidavit.
ಪ್ರಮಾಣ ಪತ್ರ (ಶಪಥ ಪತ್ರಗಳು).

Q. No. 9. Solve **any two** of the following problems : Marks : 10×2=20

ಕೆಳಗಿನವುಗಳಲ್ಲಿ ಯಾವುದಾದರೂ ಎರಡು ಸಮಸ್ಯೆಗಳನ್ನು ಪರಿಹರಿಸಿರಿ :

(a) 'X' has instituted a suit against his wife 'Y' in the civil court at Kalaburgi. 'Y' is residing at Kolar with her parents. She has no income of her own and therefore, she is finding it difficult to travel to Kalaburgi frequently to attend the proceedings. Advice her.

'X'ನು ತನ್ನ ಪತ್ನಿ 'Y'ಳ ವಿರುದ್ಧ ಕಲಬುರಗಿಯ ದಿವಾನಿ ನ್ಯಾಯಾಲಯದಲ್ಲಿ ದಾವೆಯೊಂದನ್ನು ಹೂಡಿದ್ದಾನೆ. 'Y'ಳು ತನ್ನ ಪಾಲಕರೊಂದಿಗೆ ಕೋಲಾರದಲ್ಲಿ ವಾಸಿಸುತ್ತಿದ್ದಾಳೆ. ಅವಳಿಗೆ ತನ್ನದೇ ಆದ ಆದಾಯವಿಲ್ಲ, ಹೀಗಾಗಿ ಅವಳಿಗೆ ಪದೇ ಪದೇ ಕಲಬುರಗಿಗೆ ದಾವೆಯಲ್ಲಿ ಹಾಜರಾಗಲು ಹೋಗುವುದು ಕಷ್ಟಕರವಾಗಿದೆ. ಅವಳಿಗೆ ಸಲಹೆ ನೀಡಿರಿ.



(b) Prakash had sued Ashok for defamation. The suit was decided in favour of Prakash. Ashok preferred an appeal against the judgement of trial court. Prakash died during the pendency of appeal. Legal representatives of Prakash have applied for being impleaded as respondents. Decide.

ಪ್ರಕಾಶನು ಅಶೋಕನ ವಿರುದ್ಧ ಮಾನಹಾನಿಗಾಗಿ ದಾವೆಯನ್ನು ಹೂಡಿದನು. ಆ ದಾವೆಯು ಪ್ರಕಾಶನ ಪರವಾಗಿ ಇತ್ಯರ್ಥವಾಗಿತ್ತು. ನ್ಯಾಯಾಲಯದ ಆದೇಶದ ವಿರುದ್ಧ ಅಶೋಕನು ಮೇಲ್ಮನವಿಯನ್ನು ಮಾಡಿದ್ದಾನೆ. ಮೇಲ್ಮನವಿಯು ಇತ್ಯರ್ಥವಾಗುವ ಮುಂಚೆಯೇ ಪ್ರಕಾಶನು ನಿಧನ ಹೊಂದಿದ್ದಾನೆ. ಪ್ರಕಾಶನ ಕಾನೂನು ಸಮ್ಮತ ಪ್ರತಿನಿಧಿಗಳು ತಮ್ಮನ್ನು ಎದುರುಗಾರರೆಂದು ಸೇರ್ಪಡೆಗೊಳಿಸಬೇಕೆಂದು ಅರ್ಜಿಯನ್ನು ಹಾಕಿದ್ದಾನೆ. ನಿರ್ಧರಿಸಿರಿ.

(c) Right to sue arise to 'X' during his minority. 'X' dies one day after attaining majority. He is succeeded by his son 'Y' who is minor. Determine the effect on the period of limitation.

'X'ನು ಅಪ್ರಾಪ್ತ ವಯಸ್ಕನಾಗಿರುವಾಗ ಆತನಿಗೆ ದಾವೆಯ ಹಕ್ಕು ಲಭಿಸುತ್ತದೆ. 'X' ಪ್ರಾಪ್ತ ವಯಸ್ಕನಾದ ಒಂದು ದಿನದ ನಂತರ ಮರಣ ಹೊಂದುತ್ತಾನೆ. ಅವನ ಅಪ್ರಾಪ್ತ ವಯಸ್ಕ ಮಗನಾದ 'Y'ನು ಆತನ ಉತ್ತರಾಧಿಕಾರಿಯಾಗುತ್ತಾನೆ. ಕಾಲಮಿತಿ ಅವಧಿಯ ಮೇಲಿನ ಪರಿಣಾಮಗಳನ್ನು ನಿರ್ಧರಿಸಿರಿ.

---

**V Semester 3 Year LL.B./IX Semester 5 Year B.A. LL.B. (Maj. - Min. System)/ B.B.A. LL.B./B.Com. LL.B. Examination, March/April 2023 (December 2022)**

# CIVIL PROCEDURE CODE AND LIMITATION ACT

Duration : 3 Hours Max. Marks : 80

**Instructions :** **1. Answer all five Units.**

**2. One essay type question and short note/problem is compulsory from each Unit.**

**3. Figures to the right indicates marks.**

**4. Answer should be written either in English or Kannada completely.**

UNIT – I

Q. No. 1. a) What is suit ? Describe different stages of suit. Marks : 10

ದಾವೆ ಎಂದರೇನು ? ದಾವೆಯ ವಿವಿಧ ಹಂತಗಳನ್ನು ವಿವರಿಸಿ.

OR/ಅಥವಾ

Q. No. 1. a) Briefly explain the different parts of plaint.

ವಾದ ಪತ್ರದ ವಿವಿಧ ಭಾಗಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

Q. No. 1. b) Jurisdiction as Subject matter. Marks : 6

ವಿಷಯವಸ್ತು ಆಧಾರಿತ ನ್ಯಾಯಾಧಿಕಾರ.

OR/ಅಥವಾ

Q. No. 1. b) Write a note on Decree.

'ಡಿಕ್ರಿ' ಮೇಲೆ ಟಿಪ್ಪಣಿ ಬರೆಯಿರಿ.

UNIT – II

Q. No. 2. a) Explain the circumstances under which leave to amend the pleadings shall be refused. Marks : 10

ಯಾವ ಸಂದರ್ಭದಲ್ಲಿ ವಾದ ಪತ್ರದ ತಿದ್ದುಪಡಿಗೆ ಅನುಮತಿಯನ್ನು ನಿರಾಕರಿಸಲಾಗುತ್ತದೆ ? ವಿವರಿಸಿ.

OR/ಅಥವಾ

Q. No. 2. a) What is plaint ? State the circumstances when plaint can be rejected.

ವಾದ ಪತ್ರ ಎಂದರೇನು ? ವಾದ ಪತ್ರವು ಯಾವ ಸಂದರ್ಭದಲ್ಲಿ ತಿರಸ್ಕರಿಸಲ್ಪಡುತ್ತದೆ ?

Q. No. 2. b) Write a note on misjoinder of parties. Marks : 6

ಪಕ್ಷಗಾರರ ತಪ್ಪು ಸೇರ್ಪಡೆ ಬಗ್ಗೆ ಟಿಪ್ಪಣಿ ಬರೆಯಿರಿ.

OR/ಅಥವಾ

Q. No. 2. b) Counter claim.

ಎದಿರು ಬೇಡಿಕೆ.

UNIT – III

Q. No. 3. a) What are the 'issues' in suit ? How issues be framed ? Marks : 10

ದಾವೆಯ ವಿವಾದಾಂಶಗಳು ಎಂದರೇನು ? ವಿವಾದಾಂಶವನ್ನು ಹೇಗೆ ರಚಿಸುತ್ತಾರೆ ?

OR/ಅಥವಾ

Q. No. 3. a) Explain the consequences of appearances and non appearances of parties in suit.

ದಾವೆಗಳಲ್ಲಿ ಪಕ್ಷಗಾರರ ಹಾಜರಾತಿ ಮತ್ತು ಗೈರುಹಾಜರಿಯಿಂದ ಆಗುವ ಪರಿಣಾಮಗಳೇನು ? ವಿವರಿಸಿ.

Q. No. 3. b) Admissions. Marks : 6

ಒಪ್ಪುವಿಕೆ.

OR/ಅಥವಾ

Q. No. 3. b) Difference between judgement and decree.

ತೀರ್ಪು ಮತ್ತು ಡಿಕ್ರಿಗಳಿಗಿರುವ ವ್ಯತ್ಯಾಸವನ್ನು ತಿಳಿಸಿ.

UNIT – IV

Q. No. 4. a) State the procedure for instituting a suit by an indigent person. Marks : 10

ನಿರ್ಧನ ವ್ಯಕ್ತಿಯು ಒಂದು ದಾವೆಯನ್ನು ಹೂಡಬೇಕಾದ ಪ್ರಕ್ರಿಯೆಯನ್ನು ವಿವರಿಸಿ.

OR/ಅಥವಾ

Q. No. 4. a) When Court can appoint receiver ? Explain the power and duties of the receiver.

ನ್ಯಾಯಾಲಯ ಸ್ವೀಕೃತನನ್ನು ಯಾವಾಗ ನೇಮಿಸುವುದು ? ಅವನ ಅಧಿಕಾರ ಮತ್ತು ಕರ್ತವ್ಯಗಳನ್ನು ವಿವರಿಸಿ.



Q. No. 4. b) Write a note on Caveat. Marks : 6

ಎಚ್ಚರಿಕೆ ಪತ್ರದ ಬಗ್ಗೆ ಟಿಪ್ಪಣಿ ಬರೆಯಿರಿ.

OR/ಅಥವಾ

Q. No. 4. b) Temporary injunctions.

ತಾತ್ಕಾಲಿಕ ನಿಬಂಧಕಾಜ್ಞೆ.

UNIT – V

Q. No. 5. a) Distinguish between limitation and estoppel. Marks : 10

ಕಾಲಮಿತಿ ಮತ್ತು ವಿಭಂದಕ್ಕೆ ಇರುವ ವ್ಯತ್ಯಾಸಗಳು ಯಾವುವು ?

OR/ಅಥವಾ

Q. No. 5. a) Explain the circumstances in which delay will be condoned under the Limitation Act.

ಕಾಲಮಿತಿ ಅಧಿನಿಯಮದಡಿಯಲ್ಲಿ ದಾವೆ ಹೂಡಲು ವಿಳಂಬವಾಗುವುದನ್ನು ಯಾವ ಸಂದರ್ಭದಲ್ಲಿ ಮನ್ನಾ ಮಾಡಲಾಗುವುದು ಎಂಬುದನ್ನು ವಿವರಿಸಿ.

Q. No. 5. b) Prescription. Marks : 6

ದೀರ್ಘಕಾಲದ ಭೋಗಾಧಿಕಾರ.

OR/ಅಥವಾ

Q. No. 5. b) Acknowledgement.

ಅಧಿಸ್ವೀಕೃತಿ.

**V Semester 3 Yrs. LL.B./IX Semester 5 Year B.A. LL.B. /B.B.A. LL.B./ B.Com. LL.B./ B.A. LL.B.(Maj.-Min.System) Examination, March/April 2023 (December 2022)**

## CIVIL PROCEDURE CODE AND LIMITATION ACT

Duration : 3 Hours | Max. Marks : 100

**Instructions :** **1. Answer Q. No. 9 and any five of the remaining questions.**
**2. Q. No. 9 carries 20 marks and the remaining questions carry 16 marks each.**
**3. Answers should be written either in English or Kannada completely.**

Q. No. 1. Explain the nature, object, extent and conditions of Res-Judicata. Marks : 16

ನಿರ್ಣಿತ ನ್ಯಾಯದ ಸ್ವಭಾವ, ಉದ್ದೇಶ, ವ್ಯಾಪ್ತಿ ಮತ್ತು ಷರತ್ತುಗಳನ್ನು ವಿವರಿಸಿ.

Q. No. 2. What is written statement ? When can a set-off and counter claim be pleaded ? Marks : 16

ಪ್ರತಿವಾದ ಪತ್ರ ಎಂದರೇನು ? ವಜಾವಟ್ಟು ಮತ್ತು ಪ್ರತಿಹಕ್ಕನ್ನು ಯಾವಾಗ ವಾದಿಸಬಹುದು ?

Q. No. 3. State the purpose for which a receiver can be appointed. Explain the powers and functions of the receiver. Marks : 16

ರಿಸೀವರನ್ನು ನೇಮಕ ಮಾಡುವ ಉದ್ದೇಶಗಳನ್ನು ತಿಳಿಸಿ. ರಿಸೀವರನ ಅಧಿಕಾರ ಮತ್ತು ಕಾರ್ಯಗಳನ್ನು ವಿವರಿಸಿ.

Q. No. 4. What is review ? State the grounds for review and explain who can apply for review. Marks : 16

ಪುನರಾವಲೋಕನವೆಂದರೇನು ? ಯಾವ ಆಧಾರದ ಮೇಲೆ ಪುನರಾವಲೋಕನ ಮಾಡಬಹುದು ಮತ್ತು ಯಾರು ಪುನರಾವಲೋಕನ ಅರ್ಜಿ ಸಲ್ಲಿಸಬಹುದು ?

Q. No. 5. Discuss the provisions relating to stay of suits and transfer of suit under civil procedure code. Marks : 16

ದಿವಾಣಿ ಪ್ರಕ್ರಿಯೆ ಸಂಹಿತೆಯ ಪ್ರಕಾರ ದಾವೆಗಳ ತಡೆ ಮತ್ತು ದಾವೆಯ ವರ್ಗಾವಣೆಗೆ ಸಂಬಂಧಪಟ್ಟ ಉಪಬಂಧಗಳನ್ನು ಚರ್ಚಿಸಿ.

Q. No. 6. Explain briefly the different modes of execution of a decree. Marks : 16

ಡಿಕ್ರಿಯ ಅಮಲ್ಜಾರಿ ಮಾಡುವ ವಿವಿಧ ವಿಧಾನಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

Q. No. 7. What is meant by Acknowledgement ? Explain the ingredients and effects of Acknowledgement. Marks : 16

ಅಧಿಸ್ವೀಕಾರ ಎಂದರೇನು ? ಅಧಿಸ್ವೀಕಾರದಲ್ಲಿರಬೇಕಾದ ಅವಶ್ಯಕ ಅಂಶಗಳು ಮತ್ತು ಪರಿಣಾಮಗಳನ್ನು ವಿವರಿಸಿ.

Q. No. 8. Answer **any two** of the following. Marks : 2×8=16

ಕೆಳಗಿನವುಗಳಲ್ಲಿ ಎರಡಕ್ಕೆ ಉತ್ತರಿಸಿ.

(a) Substituted Service.

ಬದಲಿ ಸೇವೆ.

(b) Appeal to Supreme Court.

ಸರ್ವೋಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ.

(c) Representative Suit.

ಪ್ರತಿನಿಧಿ ದಾವೆ.

Q. No. 9. Solve **any two** of the following problems. Marks : 2×10=20

ಯಾವುದಾದರೂ ಎರಡು ಸಮಸ್ಯೆಯನ್ನು ಬಗೆಹರಿಸಿ.

(a) 'X' Sues 'Z' for possession of property based on ownership, which was dismissed by court. 'X' files another suit for possession in a court of different jurisdiction based on adverse possession against 'Z'. Can 'X' succeed ? Discuss.

'X' ನು ತಾನೇ ಸ್ವತ್ತಿನ ಒಡೆಯನೆಂದು ಅದರ ಅನುಭೋಗಕ್ಕಾಗಿ ಮತ್ತು ವಶಪಡಿಸಿಕೊಳ್ಳಲು 'Z' ನ ವಿರುದ್ಧ ದಾವೆ ಹೂಡುತ್ತಾನೆ . ಆ ದಾವೆ ವಜಾಗೊಂಡ ನಂತರ 'X' ನು ಮತ್ತೊಂದು ದಾವೆಯನ್ನು 'Z' ನ ವಿರುದ್ಧ ಪ್ರತಿಕೂಲ ಕಬ್ಜೆಯ ಕಾರಣದ ಮೇಲೆ ಹೂಡುತ್ತಾನೆ. 'X' ನು ಜಯಶಾಲಿಯಾಗುವನೇ ? ಚರ್ಚಿಸಿ.



(b) 'A' sues 'B' in a foreign court. The suit is dismissed. Thereafter 'A' wants to file the same suit against 'B' in India on the same cause of action. Whether he can do so ? Decide.

'A' ಎಂಬುವವನು 'B' ನ ವಿರುದ್ಧ ವಿದೇಶಿ ನ್ಯಾಯಾಲಯದಲ್ಲಿ ಒಂದು ದಾವೆ ಹೂಡುತ್ತಾನೆ. ಆ ದಾವೆಯು ವಜಾಗೊಳ್ಳುತ್ತದೆ. ತದನಂತರ 'A' ಯು ಅದೇ ವ್ಯಾಜ್ಯ ಕಾರಣಕ್ಕೆ 'B'ಯ ವಿರುದ್ಧ ಭಾರತದ ನ್ಯಾಯಾಲಯದಲ್ಲಿ ದಾವೆ ಹೂಡಲು ಬಯಸುತ್ತಾನೆ. ಅವನು ಹಾಗೆ ದಾವೆ ಹೂಡಬಹುದೇ ? ತೀರ್ಮಾನಿಸಿ.

(c) Vishal takes the debt from Avinash under oral terms. Vishal gives a written acknowledgement, after the expiry of two years with an apology for the delay. Determine the validity of the acknowledgement.

ವಿಶಾಲನು ಅವಿನಾಶನಿಂದ ಬಾಯಿ ಮಾತಿನ ಮೇಲೆ ಸಾಲ ಪಡೆದಿರುತ್ತಾನೆ. ಎರಡು ವರ್ಷಗಳ ತರುವಾಯದಲ್ಲಿ ವಿಶಾಲನು ವಿಳಂಬಕ್ಕಾಗಿ ಕ್ಷಮೆಯೊಂದಿಗೆ, ಲಿಖಿತ ರೂಪದ ಸ್ವೀಕೃತಿಯನ್ನು ನೀಡುತ್ತಾನೆ. ಆ ಸ್ವೀಕೃತಿಯ ಸಿಂಧುತ್ವವನ್ನು ನಿರ್ಧರಿಸಿರಿ.

---

0501/0901/2062

**Fifth Semester 3 Year LL.B./IX Sem. 5 Year B.A. LL.B./ B.B.A. LL.B./B.Com. LL.B./B.A. LL.B. (Maj.-Min. System) Examination, Oct./Nov. 2022 (June 2022)**

**CIVIL PROCEDURE CODE AND LIMITATION ACT**

Duration : 3 Hours Max. Marks : 100

**Instructions :**
1. **Answer Q. No. 9 and any five of the remaining questions.**
2. **Q. No. 9 carries 20 marks and the remaining questions carry 16 marks each.**
3. **Answers should be written either in English or Kannada completely.**

Q. No. 1. Discuss the provisions pertaining to 'Place of suits' under Civil Procedure Code. Marks : 16

ದಿವಾಣಿ ಪ್ರಕ್ರಿಯಾ ಸಂಹಿತೆ ಅಡಿಯಲ್ಲಿ 'ದಾವೆಯ ಸ್ಥಳಕ್ಕೆ' ಸಂಬಂಧಿಸಿದ ಉಪಬಂಧಗಳನ್ನು ಚರ್ಚಿಸಿರಿ.

Q. No. 2. Explain the general rules of pleading. Marks : 16

ವಾದ-ಪ್ರತಿವಾದ ಪತ್ರಗಳ ಸಾಮಾನ್ಯ ನಿಯಮಗಳನ್ನು ವಿವರಿಸಿರಿ.

Q. No. 3. What is interpleader suit ? Explain the conditions and procedure relating to an interpleader suit. Marks : 16

ಅಂತರವಾದ ದಾವೆ ಎಂದರೇನು ? ಅಂತರವಾದ ದಾವೆಗೆ ಸಂಬಂಧಿಸಿದ ಷರತ್ತುಗಳನ್ನು ಮತ್ತು ಪ್ರಕ್ರಿಯೆಗಳನ್ನು ವಿವರಿಸಿರಿ.

Q. No. 4. What are the pre-conditions and procedure to be followed in institution of suits by or against the government ? Explain. Marks : 16

ಸರಕಾರದಿಂದ ಅಥವಾ ಸರಕಾರದ ವಿರುದ್ಧವಾಗಿ ದಾವೆಗಳನ್ನು ಹೂಡುವಾಗ ಅನುಸರಿಸಬೇಕಾದ ಪೂರ್ವಷರತ್ತುಗಳು ಮತ್ತು ಪ್ರಕ್ರಿಯೆಗಳು ಯಾವುವು ? ವಿವರಿಸಿರಿ.

Q. No. 5. What is a Commission ? What are the different purposes for which a Commission may be appointed ? Marks : 16

ಆಯೋಗ ಎಂದರೇನು ? ಯಾವ ವಿವಿಧ ಉದ್ದೇಶಗಳಿಗಾಗಿ ಆಯೋಗವನ್ನು ನೇಮಿಸಬಹುದು ?

P.T.O.

Q. No. 6. Discuss about reference under CPC. Marks : 16

ದಿವಾಣಿ ಪ್ರಕ್ರಿಯಾ ಸಂಹಿತೆಯ ಅಡಿಯಲ್ಲಿ ಅಭಿಪ್ರಾಯ ಕೋರಿಕೆಯನ್ನು ಕುರಿತು ಚರ್ಚಿಸಿರಿ.

Q. No. 7. What is legal disability ? Discuss the provisions in the Limitation Act affording protection under such disability. Marks : 16

ಕಾನೂನಿನ ದೃಷ್ಟಿಯಿಂದ ಅನರ್ಹತೆ ಎಂದರೇನು ? ಕಾಲಪರಿಮಿತಿ ಅಧಿನಿಯಮದಲ್ಲಿ ಇಂತಹ ಅನರ್ಹತೆಗೆ ಇರುವ ರಕ್ಷಣೆಯ ಉಪಬಂಧಗಳನ್ನು ಚರ್ಚಿಸಿರಿ.

Q. No. 8. Write short note on **any two** of the following : Marks : 2×8=16

ಕೆಳಗಿನ ಯಾವುದಾದರೂ ಎರಡಕ್ಕೆ ಲಘು ಟಿಪ್ಪಣಿ ಬರೆಯಿರಿ :

(a) Foreign judgement

ವಿದೇಶೀ ತೀರ್ಪು

(b) Set-off

ವಜಾವಟ್ಟು

(c) Affidavit.

ಪ್ರಮಾಣ ಪತ್ರ (ಶಪಥ ಪತ್ರಗಳು).

Q. No. 9. Solve **any two** of the following problems : Marks : 2×10=20

ಕೆಳಗಿನವುಗಳಲ್ಲಿ ಯಾವುದಾದರೂ ಎರಡು ಸಮಸ್ಯೆಗಳನ್ನು ಪರಿಹರಿಸಿ :

(a) 'X' is a permanent resident of Hubballi and 'Y' is a permanent resident of Bangalore. 'X' has taken a loan from 'Y' at Hubballi. He has not repaid the loan till today. 'Y' has instituted a suit for recovery of the said loan against 'X' at Bangalore. 'X' has raised objection as to the jurisdiction. Decide.

'ಎಕ್ಸ್'ನು ಹುಬ್ಬಳ್ಳಿಯ ಶಾಶ್ವತ ನಿವಾಸಿಯಾಗಿದ್ದು, 'ವೈ'ನು ಬೆಂಗಳೂರಿನ ಶಾಶ್ವತ ನಿವಾಸಿಯಾಗಿದ್ದಾನೆ. 'ಎಕ್ಸ್'ನು ಹುಬ್ಬಳ್ಳಿಯಲ್ಲಿ 'ವೈ'ನಿಂದ ಸಾಲವನ್ನು ಪಡೆದಿದ್ದಾನೆ. ಅವನು ಇಲ್ಲಿಯವರೆಗೂ ಆ ಸಾಲವನ್ನು ಮರುಪಾವತಿ ಮಾಡಿಲ್ಲ. 'ವೈ'ನು ಬೆಂಗಳೂರಿನಲ್ಲಿ 'ಎಕ್ಸ್'ನ ವಿರುದ್ಧ ದಾವೆಯನ್ನು ಸಾಲದ ಮರುಪಾವತಿಗಾಗಿ ಹೂಡಿದ್ದಾನೆ. 'ಎಕ್ಸ್'ನು ನ್ಯಾಯಾಧಿಕಾರ ವ್ಯಾಪ್ತಿಯನ್ನು ಕುರಿತು ಆಕ್ಷೇಪಣೆಯನ್ನು ಎತ್ತಿದ್ದಾನೆ. ನಿರ್ಧರಿಸಿರಿ.



(b) Prakash has sued Ashok for defamation. The suit was decided in favour of Prakash. Ashok preferred an appeal against the judgement of lower court. Prakash died during the pendency of appeal. Legal representatives of Prakash have applied for being impleaded as respondents. Decide.

ಪ್ರಕಾಶನು ಅಶೋಕನ ವಿರುದ್ಧ ಮಾನಹಾನಿಗಾಗಿ ದಾವೆಯನ್ನು ಹೂಡಿದನು. ಆ ದಾವೆಯು ಪ್ರಕಾಶನ ಪರವಾಗಿ ಇತ್ಯರ್ಥವಾಗಿತ್ತು. ನ್ಯಾಯಾಲಯದ ಆದೇಶದ ವಿರುದ್ಧ ಅಶೋಕನು ಮೇಲ್ಮನವಿಯನ್ನು ಮಾಡಿದ್ದಾನೆ. ಮೇಲ್ಮನವಿಯು ಇತ್ಯರ್ಥವಾಗುವ ಮುಂಚೆಯೇ ಪ್ರಕಾಶನು ನಿಧನ ಹೊಂದಿದ್ದಾನೆ. ಪ್ರಕಾಶನ ಕಾನೂನುಸಮ್ಮತ ಪ್ರತಿನಿಧಿಗಳು ತಮ್ಮನ್ನು ಎದುರುಗಾರರೆಂದು ಸೇರ್ಪಡೆಗೊಳ್ಳಬೇಕೆಂದು ಅರ್ಜಿಯನ್ನು ಹಾಕಿದ್ದಾನೆ. ನಿರ್ಧರಿಸಿರಿ.

(c) 'A' wants to file a suit against 'B'. As the court was closed due to the holiday and that being the last day of the limitation, he could not file the suit. Mr. 'A' seeks extension of limitation period-will he succeed ?

'A'ನು 'B'ನ ವಿರುದ್ಧ ಒಂದು ದಾವೆ ಹೂಡಲು ಬಯಸುತ್ತಾನೆ. ಆದರೆ ಆ ದಿನದಂದು ನ್ಯಾಯಾಲಯವು ರಜಾ ದಿನವಿರುವ ಕಾರಣ ಮುಚ್ಚಿರುತ್ತದೆ. ಮತ್ತು ಅದೇ ದಿನವೆ, ಆ ದಾವೆ ಹೂಡಲು ಕೊನೆಯ ದಿನವೂ ಆಗಿರುತ್ತದೆ. ಇದೇ ರಜಾದಿನದ ಕಾರಣದಿಂದಾಗಿ ತನಗೆ ದಾವೆ ಹಾಕಲು ಆಗಲಿಲ್ಲವೆಂಬ ಕಾರಣ ಮುಂದೆ ಮಾಡಿ ಕಾಲಮಿತಿಯ ವಿಸ್ತರಣೆಗಾಗಿ ಕೋರಿಕೊಳ್ಳುತ್ತಾನೆ. 'A'ನು ಸಫಲನಾಗುವನೆ ?

---

**V Semester 3 Year LL.B. Examination, Oct./Nov. 2022 (June 2022)**
**CIVIL PROCEDURE CODE AND LIMITATION ACT**

Duration : 3 Hours    Max. Marks : 80

**Instructions :** **1. Answer all five Units.**
**2. One essay type question and short note/problems is compulsory from each Unit.**
**3. Figures to the right indicate marks.**
**4. Answer should be written either in English or Kannada completely.**

UNIT – I

Q. No. 1. a) Discuss the provisions pertaining to 'Place of suits' under civil procedure code. Marks : 10

ದಿವಾಣಿ ಪ್ರಕ್ರಿಯಾ ಸಂಹಿತೆ ಅಡಿಯಲ್ಲಿ 'ದಾವೆಯ ಸ್ಥಳಕ್ಕೆ' ಸಂಬಂಧಿಸಿದ ಉಪಬಂಧಗಳನ್ನು ಚರ್ಚಿಸಿರಿ.

OR/ಅಥವಾ

Q. No. 1. a) Briefly describe the various stages of a suit. Marks : 10

ದಾವೆಯೊಂದರ ವಿವಿಧ ಹಂತಗಳನ್ನು ಸಂಕ್ಷಿಪ್ತವಾಗಿ ವಿವರಿಸಿರಿ.

Q. No. 1. b) Doctrine of res-subjudice. Marks : 6

ದಾವೆಯ ತಡೆಯ ನಿಯಮ.

OR/ಅಥವಾ

Q. No. 1. b) Sri Ramesh has instituted a suit against his wife Aruna in the civil court at Dharawad. Aruna is residing at Kalaburagi with her parents. She has no income of her own and hence, she is finding it difficult to travel to Dharawad frequently to attend the proceedings. Advise her. Marks : 6

ಶ್ರೀ ರಮೇಶನು ತನ್ನ ಪತ್ನಿ ಅರುಣಾಳ ವಿರುದ್ಧ ಧಾರವಾಡದ ದಿವಾನಿ ನ್ಯಾಯಾಲಯದಲ್ಲಿ ದಾವೆಯೊಂದನ್ನು ಹೂಡಿದ್ದಾನೆ. ಅರುಣಾಳು ಕಲಬುರಗಿಯಲ್ಲಿ ತನ್ನ ಪಾಲಕರೊಂದಿಗೆ ವಾಸಿಸುತ್ತಿದ್ದಾಳೆ. ಅವಳಿಗೆ ತನ್ನದೇ ಆದ ಆದಾಯವಿಲ್ಲ, ಹೀಗಾಗಿ ಅವಳಿಗೆ ಪದೇ ಪದೇ ಧಾರವಾಡಕ್ಕೆ ದಾವೆಯ ಪ್ರಕ್ರಿಯೆಗಾಗಿ ಹೋಗುವುದು ಕಷ್ಟಕರವಾಗಿದೆ. ಅವಳಿಗೆ ಸಲಹೆ ನೀಡಿರಿ.

UNIT – II

Q. No. 2. a) What are the rules regarding institution of suits ? Explain. Marks : 10
ದಾವೆಗಳನ್ನು ಹೂಡುವಲ್ಲಿ ಇರುವ ನಿಯಮಗಳಾವುವು ? ವಿವರಿಸಿರಿ.

OR/ಅಥವಾ

Q. No. 2. a) Explain the essentials of a plaint. Marks : 10
ವಾದ ಪತ್ರದ ಅವಶ್ಯಕತೆಗಳನ್ನು ವಿವರಿಸಿರಿ.

Q. No. 2. b) Counter claim. Marks : 6
ಪ್ರತಿ ಹಕ್ಕು.

OR/ಅಥವಾ

Q. No. 2. b) Substitute service. Marks : 6
ಬದಲಿ ಸೇವೆ.

UNIT – III

Q. No. 3. a) What is an exparte decree ? State the remedies available to the person against whom such decree is passed. Marks : 10
ಏಕಪಕ್ಷೀಯ ನಿರ್ಣಯವೆಂದರೇನು ? ಯಾವ ವ್ಯಕ್ತಿಯ ವಿರುದ್ಧ ಅಂತಹ ನಿರ್ಣಯವನ್ನು ನೀಡಲಾಗಿದೆಯೋ ಅವನಿಗೆ ಲಭ್ಯವಿರುವ ಪರಿಹಾರೋಪಾಯಗಳನ್ನು ಹೇಳಿರಿ.

OR/ಅಥವಾ

Q. No. 3. a) Define judgement and distinguish it with decree. Marks : 10
ತೀರ್ಪನ್ನು ವ್ಯಾಖ್ಯಾನಿಸಿ ಮತ್ತು ಇದನ್ನು ಡಿಕ್ರಿಯೊಂದಿಗೆ ವ್ಯತ್ಯಾಸಿಸಿ.

Q. No. 3. b) Adjornment. Marks : 6
ಮುಂದೂಡಿಕೆ.

OR/ಅಥವಾ

Q. No. 3. b) Inter-pleader suit. Marks : 6
ಅಂತರ್ ದಾವೆ.



UNIT – IV

Q. No. 4. a) When can a court appoint receiver ? Explain the powers and duties of the receivers. Marks : 10
ನ್ಯಾಯಾಲಯವು ಸ್ವೀಕೃತಿದಾರನನ್ನು ಯಾವಾಗ ನೇಮಿಸಬಹುದು ? ಅವನ ಅಧಿಕಾರ ಮತ್ತು ಕರ್ತವ್ಯಗಳನ್ನು ವಿವರಿಸಿರಿ.

OR/ಅಥವಾ

Q. No. 4. a) State the rules regarding suits by or against minds and unsound persons. Marks : 10
ಅಪ್ರಾಪ್ತರು ಮತ್ತು ಬುದ್ಧಿಭ್ರಮಣೆಯ ವ್ಯಕ್ತಿಗಳ ಪರವಾಗಿ ಅಥವಾ ವಿರುದ್ಧವಾಗಿ ಹೂಡುವ ದಾವೆಗಳಲ್ಲಿಯ ನಿಯಮಗಳನ್ನು ಹೇಳಿರಿ.

Q. No. 4. b) Temporary injunction. Marks : 6
ತಾತ್ಕಾಲಿಕ ನಿರ್ಬಂಧ ಕಾಜ್ಞೆ.

OR/ಅಥವಾ

Q. No. 4. b) Re-view. Marks : 6
ಪುನರ್-ಅವಲೋಕನ.

UNIT – V

Q. No. 5. a) Explain the provisions in respect of condonation of delay. Marks : 10
ವಿಳಂಬ ಮನ್ನಿಸುವಿಕೆಗೆ ಸಂಬಂಧಿಸಿದ ನಿಯಮಗಳನ್ನು ವಿವರಿಸಿರಿ.

OR/ಅಥವಾ

Q. No. 5. a) Explain the salient features of Limitation Act. Marks : 10
ಕಾಲಪರಿಮಿತಿ ಅಧಿನಿಯಮದ ಪ್ರಮುಖ ಲಕ್ಷಣಗಳನ್ನು ವಿವರಿಸಿರಿ.

Q. No. 5. b) 'X' takes the debt from 'Y' under oral terms. X gives a written acknowledgement, after the expiry of two years. Then he pleads sorry for not paying the debt yet. Determine the validity of acknowledgement. Marks : 6
'X'ನು 'Y'ನಿಂದ ಬಾಯಿ ಮಾತಿನ ಮೇಲೆ ಸಾಲ ಪಡೆದಿದ್ದಾನೆ. 'X' ತಾನು ಇದುವರೆಗೆ ಸಾಲ ಹಿಂದಿರುಗಿಸದೆ ಇರುವುದಕ್ಕಾಗಿ ಕ್ಷಮೆಯಾಚಿಸಿ ಎರಡು ವರ್ಷಗಳ ನಂತರ ಲಿಖಿತ ಅಧಿಸ್ವೀಕೃತಿ ನೀಡುತ್ತಾನೆ. ಈ ಅಧಿಸ್ವೀಕೃತಿಯ ಸಿಂಧುತ್ವವನ್ನು ನಿರ್ಧರಿಸಿರಿ.

OR/ಅಥವಾ

Q. No. 5. b) Acknowledgement. Marks : 6
ಅಧಿಸ್ವೀಕೃತಿ.

---

0501/0901/2062

**V Semester 3 Years LL.B./IX Semester 5 Years B.A. LL.B. (Maj.-Min. System)/ B.A.LL.B./B.B.A.LL.B. Examination, October/November 2021**

**CIVIL PROCEDURE CODE AND LIMITATION ACT**

Duration : 3 Hours Max. Marks : 100

**Instructions :** **1. Answer Q. No. 11 and any five of the remaining questions.**

**2. Q. No. 11 carries 20 marks and others carry 16 marks each.**

**3. Answer should be written either in English or Kannada completely.**

**ಸೂಚನೆಗಳು :** **1.** ಪ್ರಶ್ನೆ ಸಂಖ್ಯೆ **11** ಮತ್ತು ಉಳಿದವುಗಳಲ್ಲಿ ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರಿಸಿ.

**2.** ಪ್ರಶ್ನೆ ಸಂಖ್ಯೆ **11** ಕ್ಕೆ **20** ಅಂಕಗಳು ಮತ್ತು ಉಳಿದವುಗಳಿಗೆ ತಲಾ **16** ಅಂಕಗಳು.

**3.** ಉತ್ತರಗಳನ್ನು ಸಂಪೂರ್ಣವಾಗಿ ಆಂಗ್ಲ ಅಥವಾ ಕನ್ನಡ ಭಾಷೆಯಲ್ಲಿ ಬರೆಯಿರಿ.

Q. No. 1. Define a 'Decree'. Explain the essentials and classes of decree. Marks : 16

'ಡಿಕ್ರಿ'ಯನ್ನು ವ್ಯಾಖ್ಯಾನಿಸಿ. ಡಿಕ್ರಿಯ ಅವಶ್ಯಕ ಅಂಶಗಳನ್ನು ಮತ್ತು ಪ್ರಕಾರಗಳನ್ನು ವಿವರಿಸಿ.

Q. No. 2. Explain the different modes of service of Summons. Marks : 16

ಸಮನ್ಸ್‌ನ್ನು ಜಾರಿ ಮಾಡುವ ವಿವಿಧ ವಿಧಾನಗಳನ್ನು ವಿವರಿಸಿರಿ.

Q. No. 3. What is a 'Plaint' ? Explain the contents of a plaint. Marks : 16

'ವಾದ ಪತ್ರ' ಎಂದರೇನು ? ಒಂದು ವಾದ ಪತ್ರ (Plaint) ಒಳಾಂಶಗಳನ್ನು ವಿವರಿಸಿ.

Q. No. 4. Describe the provisions relating to adjournment of proceedings. Marks : 16

ಪ್ರಕರಣದ ವಿಚಾರಣೆಯನ್ನು ಮುಂದೂಡುವಿಕೆ ಕುರಿತಾಗಿ ಇರುವ ಉಪಬಂಧಗಳನ್ನು ವಿವರಿಸಿ.

Q. No. 5. Explain the powers of the Appellate Court. Marks : 16

ಮೇಲ್ಮನವಿ ನ್ಯಾಯಾಲಯದ ಅಧಿಕಾರಗಳನ್ನು ವಿವರಿಸಿ.

Q. No. 6. What is an 'attachment' ? State the properties which are not liable for attachment and sale inexecution of a decree. Marks : 16

'ಜಪ್ತಿ' ಎಂದರೇನು ? ಒಂದು ಡಿಕ್ರಿಯ ಅಮಲ್ಜಾರಿಯಲ್ಲಿ ಜಪ್ತಿ ಮತ್ತು ಮಾರಾಟ ಮಾಡಲಾಗದ ಸ್ವತ್ತುಗಳು ಯಾವುವು ? ತಿಳಿಸಿ.

P.T.O.

Q. No. 7. What is an 'Acknowledgement of Debt' ? What is its effects on limitation ? Marks : 16

ಋಣದ ಸ್ವೀಕೃತಿ ಎಂದರೇನು ? ಕಾಲ ಪರಿಮಿತಿಯ ಮೇಲೆ ಇದರ ಪರಿಣಾಮವೇನು ?

Q. No. 8. What is meant by jurisdiction of the court ? Explain the kinds of jurisdiction with illustrations. Marks : 16

ನ್ಯಾಯಾಲಯದ ಅಧಿಕಾರದ ವ್ಯಾಪ್ತಿ ಎಂದರೇನು ? ವಿವಿಧ ರೀತಿಯ ಅಧಿಕಾರದ ವ್ಯಾಪ್ತಿಯ ಬಗ್ಗೆ ಉದಾಹರಣೆಯೊಂದಿಗೆ ವಿವರಿಸಿ.

Q. No. 9. What is the special procedure to be followed in a suits by or against minors ? Marks : 16

ಅಲ್ಪವಯಿಗಳ ದಾವೆ ಹೂಡುವ ಹಾಗೂ ಅವರ ವಿರುದ್ಧ ಹೂಡುವ ದಾವೆಗಳಲ್ಲಿ ಅನುಸರಿಸಬೇಕಾದ ವಿಶೇಷ ಪ್ರಕ್ರಿಯೆಯೇನು ?

Q. No. 10. Write short note on **any two** of the following : Marks : 2x8=16

ಕೆಳಗಿನವುಗಳಲ್ಲಿ ಯಾವುದಾದರೂ ಎರಡಕ್ಕೆ ಲಘು ಟಿಪ್ಪಣಿ ಬರೆಯಿರಿ :

(a) Caveat petition.
ಮುನ್ನೆಚ್ಚರಿಕಾ ಅರ್ಜಿ.

(b) Return of plaint.
ವಾದಪತ್ರದ ಹಿಂದಿರುಗಿಸುವಿಕೆ.

(c) Inherent powers of the court.
ನ್ಯಾಯಾಲಯದ ಅಂತರ್ಗತ ಅಧಿಕಾರಗಳು.

Q. No. 11. Solve **any two** problems giving reasons : Marks : 2x10=20

ಯಾವುದಾದರೂ **ಎರಡು** ಸಮಸ್ಯೆಗಳನ್ನು ಕಾರಣ ಸಹಿತವಾಗಿ ಪರಿಹರಿಸಿ.

(a) Ashok being a senior officer in XYZ Iron and Steel Co. Ltd. was in due of promotion with all qualification. But one Guru next to Ashok was promoted. Challenging it Ashok has filed a suit in civil court. Can he succeed ?

XYZ ಕಬ್ಬಿಣ ಮತ್ತು ಉಕ್ಕಿನ ಕಂಪನಿ ಲಿಮಿಟೆಡ್‌ನಲ್ಲಿ ಹಿರಿಯ ಅಧಿಕಾರಿಯಾಗಿದ್ದ ಅಶೋಕನಿಗೆ ಎಲ್ಲಾ ಅರ್ಹತೆಗಳೊಂದಿಗೆ ಮುಂಬಡ್ತಿ ಬಾಕಿ ಇರುತ್ತದೆ. ಆದರೆ ಅವರ ನಂತರದ ಅಧಿಕಾರಿ ಗುರುವಿಗೆ ಮುಂಬಡ್ತಿ ನೀಡಲಾಗಿದೆ. ಇದನ್ನು ಪ್ರಶ್ನಿಸಿ ಅಶೋಕರವರು ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹೂಡಿದ್ದಾರೆ. ಇವರು ಸಫಲರಾಗಬಹುದೆ ?



(b) 'X' has borrowed a sum of Rs. 1,00,000 against a pronote. On failure of 'X' to repay the loan 'B' has filed suit and obtained a decree on 10-10-2015 with the direction that 'X' has to repay the loan amount together with an interest @ 8% p.a. 'B' came to know that 'X' has some immovable property as well as movable properties and he is also working in a company as an officer. 'B' is filing an execution petition.

Answer the following.

(i) What is the time limitation to execute the decree obtained by 'B' ?

(ii) Draft the prayer with alternative remedies that may be claimed by 'B' in the execution petition of 'X'.

'X' ನು ವಾಗ್ದಾನ ಪತ್ರದ ಆಧಾರದ ಮೇಲೆ 'B' ಯಿಂದ ಒಂದು ಲಕ್ಷ ರೂಪಾಯಿಗಳನ್ನು ಸಾಲವಾಗಿ ಪಡೆದು ಹಿಂದಿರುಗಿಸಲು ವಿಫಲನಾಗಿದ್ದಾನೆ. 'B' ಯು 'X' ನ ವಿರುದ್ಧ ದಾವಾ ಹೂಡಿ ದಿನಾಂಕ 10-10-2015 ರಂದು ಡಿಕ್ರಿ ಪಡೆದಿದ್ದು 'X' ನಿಗೆ ಸಾಲದ ಮೊತ್ತದೊಂದಿಗೆ 8% ಬಡ್ಡಿಯನ್ನು ಸಂದಾಯ ಮಾಡುವಂತೆ ನ್ಯಾಯಾಲಯವು ನಿರ್ದೇಶಿಸಿದೆ. 'X' ನಿಗೆ ಸ್ವಲ್ಪ ಸ್ಥಿರಾಸ್ತಿ ಮತ್ತು ಚರಾಸ್ತಿಗಳು ಇವೆ ಮತ್ತು ಈತನು ಒಂದು ಕಂಪನಿಯಲ್ಲಿ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾನೆಂದು 'B' ಗೆ ತಿಳಿದು ಬಂದಿದೆ. 'B' ಯು 'X' ನ ವಿರುದ್ಧ ಅಮಲ್ಜಾರಿ ಅರ್ಜಿ ಸಲ್ಲಿಸಲು ತಯಾರಿ ಮಾಡಿದ್ದಾನೆ.

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

(i) 'B' ಯ ಈ ಡಿಕ್ರಿಯನ್ನು ಜಾರಿಗೊಳಿಸಲು ಇರುವ ಕಾಲ ಪರಿಮಿತಿ ಎಷ್ಟು ?

(ii) 'B' ಯ ಅಮಲ್ಜಾರಿ ಅರ್ಜಿಯಲ್ಲಿ 'X' ನ ವಿರುದ್ಧ ಬದಲಿ ಪರಿಹಾರಗಳೊಂದಿಗೆ ಕೇಳಬಹುದಾದ ಪ್ರಾರ್ಥನೆಯ ಕರಡನ್ನು ತಯಾರಿಸಿ.

(c) 'Somappa filed a suit for declaration that he is entitled to certain lands as an hair of Sheshappa. This suit was dismissed. Later Somappa filed another suit claiming title to the said properties by adverse possession. Whether the suit is maintainable ?

ಸೋಮಪ್ಪನು ಒಂದು ದಾವಾ ಸಲ್ಲಿಸಿ ಶೇಷಪ್ಪನ ಉತ್ತಾರಾಧಿಕಾರಿಯಾಗಿ ತಾನು ಕೆಲವು ಭೂಮಿಗೆ ಹಕ್ಕುದಾರನೆಂದು ಘೋಷಿಸಲು ಕೋರುತ್ತಾನೆ. ಈ ದಾವಾವನ್ನು ವಜಾಗೊಳಿಸಲಾಗುತ್ತದೆ. ನಂತರದಲ್ಲಿ ಸೋಮಪ್ಪನು ಅದೇ ಸ್ವತ್ತಿಗೆ ತಾನು ವ್ಯತಿರಿಕ್ತ ಸ್ವಾಧೀನತೆಯ ಆಧಾರದ ಮೇಲೆ ಹಕ್ಕುದಾರನೆಂದು ಆದೇಶಿಸುವಂತೆ ಇನ್ನೊಂದು ದಾವಾ ಸಲ್ಲಿಸುತ್ತಾನೆ. ಈ ದಾವೆಯು ಸ್ವೀಕಾರಾರ್ಹವೇ ?

---